# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್. ರಸ್ತೆ, ತುಮಕೂರು-572 103☏ : 0816-2255650, 2273511 ಫ್ಯಾಕ್ಸ್ : 0816-2270719


ಸಂಖ್ಯೆ : ತು.ವಿ.: ಪ.ವಿ.:2026-27/ 961 ದಿನಾಂಕ:25.05.2026

## ಸುತ್ತೋಲೆ

2025-26 ನೇ ಶೈಕ್ಷಣಿಕ ಸಾಲಿನ 2026 ರ ಜೂನ್ ಮಾಹೆಯಲ್ಲಿ ನಡೆಯಲಿರುವ ಸ್ನಾತಕ ಶಿಕ್ಷಣ ಪದವಿಯ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ (ಸಿ.ಬಿ.ಸಿ.ಎಸ್ ಪಠ್ಯಕ್ರಮದಂತೆ) 2023-24ನೇ ಶೈಕ್ಷಣಿಕ ಸಾಲಿನಿಂದ ಇಲ್ಲಿಯವರೆಗೆ UUCMS ತಂತ್ರಾಂಶದ ಮೂಲಕ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳಿಗೆ ಪ್ರವೇಶ ಪಡೆದಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ (ನವೀನ & ಪೂರಕ) ಮತ್ತು 2021-22 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು ಈಗಾಗಲೇ ಪರೀಕ್ಷೆ ಬರೆದು ಅನುತ್ತೀರ್ಣರಾಗಿರುವ ಸ್ನಾತಕ ಶಿಕ್ಷಣ(ಬಿ.ಇಡಿ.) ಪದವಿಯ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಾವತಿಸಿಕೊಳ್ಳುವ ಕುರಿತು ದಿನಾಂಕ:02.05.2026ರಂದು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯಲ್ಲಿ ತಿಳಿಸಿರುವಂತೆ 2021-22 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು ಈಗಾಗಲೇ ಪರೀಕ್ಷೆ ಬರೆದು ಅನುತ್ತೀರ್ಣರಾಗಿರುವ ಸ್ನಾತಕ ಶಿಕ್ಷಣ(ಬಿ.ಇಡಿ.) ಪದವಿಯ ವಿದ್ಯಾರ್ಥಿಗಳಿಂದ (ಡಬಲ್ ದಿ ಡ್ಯೂರೇಶನ್ ಪದವಿಯ) ಪೂರ್ಣ ಪ್ರಮಾಣದ ಪರೀಕ್ಷಾ ಶುಲ್ಕವನ್ನು ತಾಂತ್ರಿಕ ಕಾರಣದಿಂದಾಗಿ UUCMS ನಲ್ಲಿ ಪಾವತಿಸಿಕೊಳ್ಳಲು ಸಾಧ್ಯವಾಗದ ಹಿನ್ನಲೆಯಲ್ಲಿ ಅರ್ಹ ವಿದ್ಯಾರ್ಥಿಗಳಿಂದ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಈ ಕೆಳಕಂಡಂತೆ ತಿಳಿಸಿರುವ ಪರೀಕ್ಷಾ ಶುಲ್ಕವನ್ನು ಬಾಹ್ಯವಾಗಿ ಪಾವತಿಸಿಕೊಂಡು, ನಂತರ ಒಟ್ಟು ಶುಲ್ಕವನ್ನು ಕ್ರೋಢೀಕರಿಸಿ ವಿಶ್ವವಿದ್ಯಾನಿಲಯದ ನಿಧಿಗೆ RTGS/NEFT ಮೂಲಕ ಎಸ್.ಬಿ.ಐ. ಖಾತೆ ನಂ. : 36954908103 ಗೆ ಪರೀಕ್ಷಾ ಶುಲ್ಕವನ್ನು ದಿನಾಂಕ: 30.05.2026 ರೊಳಗೆ ಪಾವತಿಸುವುದು. ಪಾವತಿಸಿದ ಮೂಲ ಪ್ರತಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಹಾಗೂ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಹಣಕಾಸು ವಿಭಾಗಕ್ಕೆ ಸಲ್ಲಿಸುವುದು. ಈಗಾಗಲೇ ವಿದ್ಯಾರ್ಥಿಗಳು UUCMS ನಲ್ಲಿ ಪಾವತಿಸಿದ ಶುಲ್ಕವನ್ನು ಪೂರ್ಣಪ್ರಮಾಣದ ಶುಲ್ಕದಲ್ಲಿ ಕಡಿತಗೊಳಿಸಿ ಉಳಿದ ಶುಲ್ಕವನ್ನು ಪಾವತಿಸಿಕೊಳ್ಳುವುದು.

### ಶುಲ್ಕಗಳ ವಿವರ

| ಕ್ರ. ಸಂ. | ಸೆಮಿಸ್ಟರ್ | ಕೋರ್ಸ್ | ಪರೀಕ್ಷಾ ಶುಲ್ಕ | |
|---|---|---|---|---|
| 1. | I & III (ಪ್ರತಿ ಸೆಮಿಸ್ಟರ್‌ಗೆ) | ಬಿ.ಇಡಿ. | ಮೂರು ಅಥವಾ ಮೂರಕ್ಕಿಂತ ಹೆಚ್ಚು ವಿಷಯಗಳಿಗೆ ರೂ. 3,500-00/- | ಒಂದು ವಿಷಯಕ್ಕೆ ರೂ. 1000-00/- |

ಪ್ರತಿ ವಿದ್ಯಾರ್ಥಿಯಿಂದ ಸೆಮಿಸ್ಟರ್‌ವಾರು ಪ್ರತ್ಯೇಕ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವುದು.

ಈ ಮೇಲೆ ಸೂಚಿಸಿದ ಪರೀಕ್ಷಾ ಶುಲ್ಕದೊಂದಿಗೆ ಎಲ್ಲಾ ವಿದ್ಯಾರ್ಥಿಗಳು ಈ ಕೆಳಗೆ ನಮೂದಿಸಿರುವ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸುವುದು.

| ಕ್ರ.ಸಂ. | ಇತರೆ ಶುಲ್ಕಗಳ ವಿವರ | ಮೊತ್ತ (ರೂ. ಗಳಲ್ಲಿ) |
|---|---|---|
| 1. | ಅಂಕಪಟ್ಟಿ ಶುಲ್ಕ ( ಪ್ರತಿ ಸೆಮಿಸ್ಟರ್‌ಗೆ) | 300-00/- |
| 2. | ಆನ್‌ಲೈನ್ ಅರ್ಜಿ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 100-00/- |
| 3. | ಅರ್ಜಿ ಪರಿಶೀಲನಾ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 50-00/- |
| 4. | ಪರೀಕ್ಷಾ ಸಿದ್ಧತಾ ಶುಲ್ಕ (Processing fee) ( ಪ್ರತಿ ಸೆಮಿಸ್ಟರ್‌ಗೆ) | 100-00/- |

ಎಲ್ಲಾ ವರ್ಗಗಳ ಪೂರಕ ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದ (ಸೆಮಿಸ್ಟರ್‌ವಾರು) ಪರೀಕ್ಷಾ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಿಕೊಳ್ಳುವುದು.

ಕುಲಸಚಿವರು(ಪರೀಕ್ಷಾಂಗ)

ಗೆ,

ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಸ್ನಾತಕ ಶಿಕ್ಷಣ (ಬಿ.ಇಡಿ.) ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿ: ಕಛೇರಿ ಪ್ರತಿ